# <u>ಮೂಲಹಣದಲ್ಲಿ ಕಟಾಯಿಸಿದ ತೆರಿಗೆ ಹಣದ ನಕಲಿ ಪ್ರಮಾಣ ಪತ್ರಕ್ಕೆ ವಾಗ್ದಾನ ಪತ್ರ</u>

ಮಾನ್ಯರೇ,

ತಾವು ಈಗಾಗಲೇ ಕಳುಹಿಸಿದ ಮೂಲದಲ್ಲಿ ಕಟಾಯಿಸಿದ ತೆರಿಗೆ ಹಣದ ಮೂಲ ಪ್ರಮಾಣ ಪತ್ರವು ನನಗೆ ತಲುಪಿರುವುದಿಲ್ಲ/ಕಳೆದು ಹೋಗಿದೆ.

ಮೂಲದಲ್ಲಿ ಕಟಾಯಿಸಿದ ತೆರಿಗೆ ಹಣದ ಪ್ರಮಾಣ ಪತ್ರದ ವಿವರಗಳು ಈ ಕೆಳಗಿನಂತಿವೆ

| ಸರಣಿ | ಫೋಲಿಯೋ | ತೆರಿಗೆ ಕಟಾಯಿಸಿದ ಪ್ರಮಾಣ ಪತ್ರದ ಸಂಖ್ಯೆ | ಹೆಸರು | ಮೂಲ ಹಣದಲ್ಲಿ ಕಟಾಯಿಸಿದ ತೆರಿಗೆ ಮೊತ್ತ | ಕಲಾವದಿ |
|---|---|---|---|---|---|
| | | | | | |

ಈ ಮೇಲಿನ ವಿವರಣೆಯಂತೆ ನಕಲು 16ಎ ನಮೂನೆ ಪತ್ರವನ್ನು ನೀಡಲು ಈ ಮೂಲಕ ವಿನಂತಿಸುತ್ತೇನೆ.

ಇದಕ್ಕೆ ಸಂಬಂಧಪಟ್ಟಂತೆ ಈ ಕೆಳಗೆ ವಿವರಿಸಿರುವ ಪ್ರಕಾರ ನಿಗಮಕ್ಕೆ ಉಂಟಾಗಬಹುದಾದ ಎಲ್ಲಾ ರೀತಿಯ ನಷ್ಟವನ್ನು ಭರ್ತಿಮಾಡುವ ವಾಗ್ದಾನವನ್ನು ನೀಡುತ್ತೇನೆ.

ನಿಗಮವು ನಕಲು ನಮೂನೆ 16ಎ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ನಿಗಮದ ಜೊತೆ ಈ ಕೆಳಕಂಡಂತೆ ಒಡಂಬಡಿಕೆ ಮಾಡಿಕೊಂಡಿರುತ್ತೇನೆ. ನಿಗಮವು ನಕಲು ನಮೂನೆ 16ಎ ನೀಡುವುದರಿಂದ ನಿಗಮ ಹಾಗೂ ನಿಗಮದ ಆಸ್ತಿಗೆ ಉಂಟಾಗಬಹುದಾದ ಎಲ್ಲಾ ರೀತಿಯ ನಷ್ಟ, ವೆಚ್ಚಗಳು, ಕ್ರಯ, ಬೆಲೆ ಹಾನಿ, ಹೊರೆ ಮುಂತಾದವುಗಳನ್ನು ತುಂಬಿಸಿಕೊಡಲು ಎಲ್ಲಾ ಸಮಯದಲ್ಲೂ, ಎಲ್ಲಾ ರೀತಿಯಲ್ಲೂ ಒಪ್ಪಿಕೊಂಡಿರುತ್ತೇನೆ. ಮುಂದುವರೆದು, ಈ ದಿಶೆಯಲ್ಲಿ ತಗಲಬಹುದಾದ ನ್ಯಾಯಾಲಯದ ವೆಚ್ಚ, ನ್ಯಾಯಾಲಯದ ದಾವೆಗೆ ತಗಲಬಹುದಾದ ವೆಚ್ಚ, ಕಾನೂನು ನಡುವಳಿಕೆಯ ಲೆಕ್ಕ, ಹಕ್ಕು ಭಾಧ್ಯತೆ, ನಿಗಮದ ಯಾವುದೇ ಸ್ಥಿರ ಆಥವಾ ಆಸ್ತಿಗಳಿಗೆ ತಗಲಬಹುದಾದ ಹಾಗೂ ನಷ್ಟ/ವೆಚ್ಚಗಳನ್ನು ನನ್ನ/ನಮ್ಮ ವೈಯಕ್ತಿಕ/ಅಧಿಕಾರಕ್ಕೆ ಸಂಬಂಧಪಟ್ಟ ಸ್ಥಿರ ಅಥವಾ ಅಸ್ಥಿರ ಆಸ್ತಿಯಿಂದ ತುಂಬಿಕೊಳ್ಳಬಹುದಾಗಿದೆ/ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ ಎಂದು ನನ್ನ ಸ್ವಂತ ಇಚ್ಛೆಯಿಂದ ಈ ಮೂಲಕ ವಾಗ್ದಾನ ನೀಡುತ್ತೇನೆ. ಈ ವಿಷಯದಲ್ಲಿ ನನಗೆ ಯಾವುದೇ ವ್ಯಕ್ತಿಯಿಂದ ಅಥವಾ ನಿಗಮ/ನಿಗಮದ ಅಧಿಕಾರಿಗಳಿಂದ/ನಿಗಮ ನೌಕರರಿಂದ ಪ್ರಭಾವವಿರುವುದಿಲ್ಲ.

ಮುಂದುವರೆದು, ನನಗೆ ಈಗಾಗಲೇ ನೀಡಿರುವ ನಮೂನೆ 16ಎರ ಮೂಲ ಪ್ರತಿ ಸಿಕ್ಕಿದಲ್ಲಿ ಅದನ್ನು ನಿಗಮಕ್ಕೆ ಹಿಂದಿರುಗಿಸುವ ಮತ್ತು ಆದಾಯ ತೆರಿಗೆ ಕಾಯ್ದೆ ಪ್ರಕಾರ ಎರಡು ಭಾರಿ ಅಥವಾ ಅದಕ್ಕೂ ಹೆಚ್ಚು ಭಾರಿ ಆದಾಯ ತೆರಿಗೆ ಇಲಾಖೆಯಿಂದ ಮೂಲ ಹಣದಲ್ಲಿ ಕಟಾಯಿಸಿದ ಹಣಕ್ಕೆ ದಾವೆ ಹೂಡುವುದಿಲ್ಲ.
ಈಗಾಗಲೇ ದಾವೆ ಮಾಡಿರುವುದಿಲ್ಲ ಎಂದು ಪ್ರಮಾಣ ಮಾಡುತ್ತೇನೆ.

ಈ ವಾಗ್ದಾನ ಪತ್ರವನ್ನು ದಿನಾಂಕ:___________ ಮಾಹೆ__________ವರ್ಷದಂದು ಈ ಕೆಳಗೆ ವಿವರಿಸಿರುವ ಸಾಕ್ಷಿಯ ಸಮ್ಮುಖದಲ್ಲಿ ನೀಡಿರುತ್ತೇನೆ.

| <u>ಸಾಕ್ಷಿ</u> | <u>ಹೂಡಿಕೆದಾರರು</u> |
|---|---|
| **ಹಸ್ತಾಕ್ಷರ** | **ಹಸ್ತಾಕ್ಷರ** |
| **ಹೆಸರು** | **ಹೆಸರು** |
| **ವಿಳಾಸ** | **ವಿಳಾಸ** |